**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,**

**ನ್ಯಾಯಾಲಯ, ಹಾವೇರಿ.**

**ಸಿ.ಸಿ. ನಂ. 249/2023**

ಡಿ.ಡಬ್ಲ್ಯೂ- 1

| | | |
|---|---|---|
| ಹೆಸರು | : | ಹಾಜಅಲಿ ಪಟೇಲ |
| ತಂದೆಯ ಹೆಸರು | : | ಖಾದರಸಾಬ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಸಾಃ ಹಾವೇರಿ. |

**ದಿನಾಂಕಃ 29-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಪಿ.ಎನ್. ಎ. ಆರೋಪಿಯ ಪರ ವಕೀಲರಿಂದಃ**

ಮಹರೂನ್ನಿಸಾ ಕೋಳೂರ ಮತ್ತು ನೂರಅಹ್ಮದ ಮೊಕಾಶಿರವರು ನನಗೆ ಸಂಬಂಧಿಕರಾಗಬೇಕು. ಸದರಿ ಮಹರೂನ್ನಿಸಾ ಕೋಳೂರರವರು ಮನೆ ಕಟ್ಟಲು ಜಾಗ ತೆಗೆದುಕೊಳ್ಳುವ ಸಲುವಾಗಿ ಪಿರ್ಯಾದುದಾರರ ಬಳಿ ಸಾಲವನ್ನು ಬಡ್ಡಿ ಗಾಗಿ ತೆಗೆದುಕೊಂಡಿದ್ದರು. ಸದರಿ ಸಾಲ ಕೊಡಲು ಪಿರ್ಯಾದುದಾರರು ಏನಾದರೂ ಆಧಾರವಾಗಿ ಕೊಡುವಂತೆ ಮಹರೂನ್ನಿಸಾ ಕೋಳೂರರವರಿಗೆ ಕೇಳಿದ್ದರು. ಸದರಿಯವರು ಅವರ ಬಳಿ ಚೆಕ್ ಇಲ್ಲದೇ ಇದ್ದುದರಿಂದ ನನಗೆ ಸೇರಿದ ಒಂದು ಚೆಕ್ ಮತ್ತು ಇಬ್ರಾಹಿಂಸಾಬ ಮೊಕಾಶಿಯವರ ಚೆಕ್‌ನ್ನು ಇಬ್ಬರೂ ಸೇರಿ 2 ಚೆಕ್‌ಗಳನ್ನು

ಪಿರ್ಯಾದುದಾರರಿಗೆ ಕೊಟ್ಟಿರುತ್ತೇವೆ. ಸದರಿ ಮಹರುನ್ನಿಸಾರವರು ಪಡೆದುಕೊಂಡಂತಹ ಹಣವನ್ನು ನನ್ನ ಬಳಿ ಕೊಟ್ಟಿದ್ದು, ಸದರಿ ಹಣವನ್ನು ನಾನು ಪಿರ್ಯಾದುದಾರರಿಗೆ ವಾಪಸ್ಸು ನೀಡಿ, ಅದರ ಸಂಬಂಧ ಒಂದು ಬಾಂಡ ಪೇಪರನ್ನು ಮಾಡಿಸಿರುತ್ತೇವೆ. ಪಿರ್ಯಾದುದಾರರು ಇಲ್ಲಿಗೆ ವ್ಯವಹಾರ ಮುಗಿಯಿತು, ಚೆಕ್‌ನ್ನು ಹರಿದು ಹಾಕುತ್ತೇನೆಂದು ಹೇಳಿದ್ದರು. ನಂತರ ಸುಳ್ಳು ಕೇಸನ್ನು ಹಾಕಿರುತ್ತಾರೆ. ನಿ.ಡಿ.3 ನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಸಹಿ ಇದೆ ಎಂದು ನುಡಿದಿರುತ್ತಾರೆ. ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

(ಪಿರ್ಯಾದುದಾರರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.